154ಸೆಬ ನಿ=330 = (25) 4RK 01072r

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಹಾಗೂ ಶ್ರೀ ಡಿ.ಟಿ. ಶ್ರೀನಿವಾಸ್ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

**ವಿಷಯ**

ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಜಿ.ಪಿ.ಟಿ ಶಿಕ್ಷಕರ ನೇಮಕಾತಿಯಲ್ಲಿ ಅರ್ಹತೆಯಿದ್ದರು ನೇಮಕಾತಿ ಆಗಿರುವುದಿಲ್ಲ. ಈಗಾಗಲೇ ಕೆಲವು ಅಭ್ಯರ್ಥಿಗಳು ತಮಗೆ ಇರುವ ಬೇರೆ ಬೇರೆ ಮೀಸಲಾತಿಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ನಿಯಮದಂತೆ ಪರೀಕ್ಷೆಯನ್ನು ಸಹ ಬರೆದು ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾಗಿದ್ದು ಅಂತಿಮ ಪಟ್ಟಿಯಲ್ಲಿಯು ಅರ್ಹರಾಗಿದ್ದು ಕೆಲವು ಮೀಸಲಾತಿಯಡಿಯಲ್ಲಿ ಪಡೆದ ಪ್ರಮಾಣ ಪತ್ರಗಳ ನೈಜತೆ ದೃಢೀಕರಣ ಸಂದರ್ಭದಲ್ಲಿ ತಿರಸ್ಕೃತಗೊಂಡಿರುತ್ತಾರೆ. (ಉದಾಹರಣೆ ಗ್ರಾಮೀಣ, ಕನ್ನಡ ಮಾಧ್ಯಮ ಇತ್ಯಾದಿ) ಇಂತಹ ಪ್ರಕರಣಗಳಲ್ಲಿ ಅವರ ನೈಜತೆ ಪ್ರಮಾಣ ಪತ್ರದಿಂದ ತಿರಸ್ಕೃತಗೊಂಡು ಆಯ್ಕೆಯಿಂದ ವಂಚಿತರಾಗಿದ್ದಾರೆ. ಆದರೆ ಈ ಅಭ್ಯರ್ಥಿಗಳು ಸಾಮಾನ್ಯ ಗುಂಪಿನ ಅಭ್ಯರ್ಥಿಗಳಿಗಿಂತ ಹಾಗು ಇತರೆ ಗುಂಪಿನ ಅಭ್ಯರ್ಥಿಗಳಿಗಿಂತ ಹೆಚ್ಚಿನ ಅಂಕಗಳನ್ನು ಪಡೆದು ಅರ್ಹತೆಯಲ್ಲಿ ಮೇಲಿದ್ದರು ಸಹ ಜಿಪಿಟಿ ಶಿಕ್ಷಕರ ಆಯ್ಕೆಯಿಂದ ವಂಚಿತರಾಗಿರುವ ವಿಷಯವನ್ನು ನಿಯಮ 330 ರಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ**

ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ 2022ರ ನೇಮಕಾತಿಯಲ್ಲಿ ಅಭ್ಯರ್ಥಿಗಳು ಬೇರೆ ಬೇರೆ ಮೀಸಲಾತಿಯನ್ನು ಕೋರಿ ಅರ್ಜಿ ಸಲ್ಲಿಸಿ ಸಾಮಾನ್ಯ ವರ್ಗದಲ್ಲಿ ಆಯ್ಕೆಗೊಂಡವರಿಗೆ ಪ್ರಮಾಣ ಪತ್ರಗಳ ಸಿಂಧುತ್ವವನ್ನು ಪರಿಶೀಲಿಸುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿ, ಸದರಿ ಇಲಾಖೆಯು "ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ದಿನಾಂಕ: 26.04.2021ರ ಅನಧಿಕೃತ ಟಿಪ್ಪಣಿ ಸಂಖ್ಯೆ: ಹಿಂವಕ 46 ಬಿಸಿಎ 2021 ರಲ್ಲಿ"ಇತರೆ ಮೀಸಲಾತಿ ಕೋರಿ ಸಾಮಾನ್ಯ ಅರ್ಹತೆಯಲ್ಲಿ ಆಯ್ಕೆಯಾದಲ್ಲಿ ಸದರಿ ಅಭ್ಯರ್ಥಿಗಳು ವಯೋಮಿತಿ ಸಡಿಲಿಕೆ ಅಥವಾ ಇತರೆ ಯಾವುದೇ ಮೀಸಲಾತಿಯನ್ನು ಪಡೆದಿರುವ ಕುರಿತು ಪರಿಶೀಲಿಸಬೇಕಾಗಿರುತ್ತದೆ. ಆದುದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಇತ್ಯಾದಿ) ನಿಯಮಗಳು-1992 ರನ್ವಯ ನೇರ ನೇಮಕಾತಿಯಲ್ಲಿ ಮೀಸಲಾತಿಯಡಿ ಅರ್ಜಿ ಸಲ್ಲಿಸಿ ತದನಂತರ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದಲ್ಲೂ ಸಿಂಧುತ್ವ ಪತ್ರವನ್ನು ಪಡೆಯದೇ ನೇಮಕಾತಿಗೆ ಅವಕಾಶವಿರುವುದಿಲ್ಲವೆಂದು ತಿಳಿಸಿರುವುದರಿಂದ ಮೀಸಲಾತಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಸಾಮಾನ್ಯ ವರ್ಗದಡಿ ಆಯ್ಕೆಯಾದ ಸಂದರ್ಭದಲ್ಲಿಯೂ ಅವರುಗಳ ಎಲ್ಲಾ ಮೀಸಲಾತಿ ಕೋರಿಕೆಗಳಿಗೆ ಸಂಬಂಧಿಸಿದಂತೆ ಸಿಂಧುತ್ವ ಪರಿಶೀಲನಾ ಪ್ರಮಾಣ ಪತ್ರಗಳನ್ನು ಪಡೆಯುವುದು ಅಗತ್ಯವಾಗಿರುತ್ತದೆ ಎಂದು ತಿಳಿಸಿರುತ್ತದೆ".

ಮುಂದುವರೆದು, 2022-23ನೇ ಸಾಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿ) ಹುದ್ದೆಗೆ ಸಾಮಾನ್ಯ ವರ್ಗದಡಿಯಲ್ಲಿ ಆಯ್ಕೆಯಾದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:5126/2023 C/w 5127/2023, 5128/2023, 5129/2023, 5135/2023, 5136/2023, 5148/2023, 5149/2023, 5150/2023, 5355/2023, 5356/2023 & 5357/2023ರ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು 08.04.2024 ರಂದು ನೀಡಿರುವ ತೀರ್ಪಿನಲ್ಲಿ ಅರ್ಜಿದಾರರಿಂದ ಜೀವಿತಾವಧಿಯಲ್ಲಿ ಮೀಸಲಾತಿಯನ್ನು ಪರಿತ್ಯಜಿಸುವುದಾಗಿ ಮುಚ್ಚಳಿಕೆ ಪಡೆದುಕೊಂಡು ನೇಮಕಾತಿಗೆ ಪರಿಗಣಿಸುವಂತೆ ಆದೇಶಿಸಿರುತ್ತದೆ.

ಮಾನ್ಯ ನ್ಯಾಯ ಮಂಡಳಿಯ ಆದೇಶದನ್ವಯ 2022 ನೇ ಸಾಲಿನ ಪದವೀದರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿ) ಹುದ್ದೆಗೆ ಹಿಂದುಳಿದ ವರ್ಗಗಳ ಮೀಸಲಾತಿ ಕ್ಲೇಮ್ ಮಾಡಿ ಅರ್ಜಿ ಸಲ್ಲಿಸಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗ/ಅರ್ಹತೆಯಡಿ ಆಯ್ಕೆಯಾಗಿರುವ 19 ಅರ್ಹ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸದೆ ವಿನಾಯಿತಿ ನೀಡಿ ನೇಮಕಾತಿ ಆದೇಶ ನೀಡುವಂತೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆ ನೀಡಲಾಗಿರುತ್ತದೆ.

**ಸಂಖ್ಯೆ: ಇಪಿ 109 ಪಿಎಂಎ 2024**

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.
ಎಸ್. ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ
ಶಿವಮೊಗ್ಗ ಉಸ್ತುವಾರಿ ಸಚಿವರು